KATK510024132019

# ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ

# ದಂಡಾಧಿಕಾರಿಗಳವರ ನ್ಯಾಯಾಲಯ, ಕುಣಿಗಲ್

**ಉಪಸ್ಥಿತರು: ಶ್ರೀಮತಿ ಸುಜಾತ ಎ ಬಿ.**

**ಬಿ.ಎ.ಎಲ್., ಎಲ್.ಎಲ್.ಬಿ.,**

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ

ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಕುಣಿಗಲ್.

## ದಿನಾಂಕಃ 2 ನೇ ಜುಲೈ ಮಾಹೆ - 2026

## ಸಿ.ಸಿ. ನಂಃ 1035/2019

ಫಿರ್ಯಾದುದಾರರು : **ಕರ್ನಾಟಕ ಸರ್ಕಾರವನ್ನು**

**ಪ್ರತಿನಿಧಿಸುವವರು**

**ಪೊಲೀಸ್ ಉಪನಿರೀಕ್ಷಕರು**

ಕುಣಿಗಲ್ ಪೊಲೀಸ್ ಠಾಣೆ, ಕುಣಿಗಲ್.

(ಪ್ರತಿನಿಧಿಸುವವರು ಮಾನ್ಯ ಸಹಾಯಕ

ಸರ್ಕಾರಿ ಅಭಿಯೋಜಕರು)

***-ವಿರುದ್ಧ-***

**ಆರೋಪಿತರು : ಎ1. ವಜೀರ್ ಖಾನ್ ಬಿನ್ ಗೌಸ್ ಫೀರ್,**

ವಯಸ್ಸು 50 ವರ್ಷ,

ವಾಸಃ-ಕೆ.ಆರ್.ಎಸ್. ಅಗ್ರಹಾರ,

ಕುಣಿಗಲ್ ಟೌನ್.

**ಎ2. ಮಹಮ್ಮದ್ ಮಜ್ ಬಿನ್ ವಜೀರ್ ಖಾನ್**

ವಯಸ್ಸು 21 ವರ್ಷ,

ವಾಸಃ-ಕೆ.ಆರ್.ಎಸ್. ಅಗ್ರಹಾರ,

ಕುಣಿಗಲ್ ಟೌನ್.

**ಎ3. ಚಿಕ್ಕಣ್ಣ ಬಿನ್ ಮರಯ್ಯ,**

ವಯಸ್ಸು 24 ವರ್ಷ,

ವಾಸಃ-ತರೀಕೆರೆ ಪೋಸ್ಟ್, ಕಸಬಾ

ಹೋಬಳಿ, ಕುಣಿಗಲ್ ತಾಲ್ಲೂಕು.

**( ಆರೋಪಿತರ ಪರ ಶ್ರೀ.ಕೆ.ಎನ್.ಎ., ವಕೀಲರು)**

| | |
|---|---|
| ಪ್ರಕರಣ ದಾಖಲಾದ ದಿನಾಂಕ | 23.07.2019 |
| ಪ್ರಕರಣದ ಸ್ವರೂಪ | ಭಾ.ದಂಡ ಸಂಹಿತೆ ಕಲಂ.323, 353, 504, ಸಹವಾಚಕ 34 |
| ವಿಚಾರಣೆ ಪ್ರಾರಂಭವಾದ ದಿನಾಂಕ | 27.01.2025 |
| ವಿಚಾರಣೆ ಮುಕ್ತಾಯವಾದ ದಿನಾಂಕ | 16.02.2026 |
| ತೀರ್ಪು ನೀಡಿದ ದಿನಾಂಕ | 02.07.2026 |

## ತೀರ್ಪು

ಕುಣಿಗಲ್ ಪೊಲೀಸ್ ಠಾಣೆಯ ಠಾಣಾಧಿಕಾರಿಯು ಮೇಲ್ಕಂಡ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.323, 353, 504, ಸಹವಾಚಕ 34 ಅಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಎಸಗಿರುತ್ತಾರೆಂದು ಪ್ರಸ್ತುತ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.**

ದಿನಾಂಕ 23.07.2019 ರಂದು ಬೆಳಿಗ್ಗೆ 07.30 ರ ಸಮಯದಲ್ಲಿ, ಕುಣಿಗಲ್ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕುಣಿಗಲ್ ಟೌನ್ ನ ಕುಣಿಗಲ್ - ಮೈಸೂರು ಸರ್ಕಲ್ ಬಳಿ ಇರುವ ಕರ್ನಾಟಕ ಸ್ಟೀಲ್ ಅಂಗಡಿಯ ಮುಂಭಾಗದ ರಸ್ತೆಯ ಬಲಭಾಗದಲ್ಲಿ 1ನೇ ಆರೋಪಿಯು ಎಂ.ಎಂ.ಟ್ರಾವೆಲ್ ವಾಹನವನ್ನು ನಿಲ್ಲಿಸಿದ್ದು, ಅದೇ ಸಮಯಕ್ಕೆ ಚಾಸಾ-1 ರವರು ಕೆ.ಎ-06-ಎಫ್-964 ರ ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ಕುಣಿಗಲ್ ಘಟಕದ ವಿಭಾಗದ ಡಿಪೋಗೆ ತೆಗೆದುಕೊಂಡು ಹೋಗಲು ವಾಹನವನ್ನು ಚಾಲನೆ ಮಾಡಿಕೊಂಡು ಬಂದು ಹಾರನ್ ಮಾಡಿದರೂ 1ನೇ ಆರೋಪಿಯು ವಾಹನವನ್ನು ಪಕ್ಕಕ್ಕೆ ಸರಿಸದೇ ಇದ್ದಾಗ, ರಸ್ತೆಯನ್ನು ಬಿಟ್ಟು ಪಕ್ಕಕ್ಕೆ ಹೋಗು ಅಂತ ಚಾಸಾ-1 ರವರು 1ನೇ ಆರೋಪಿಗೆ ಹೇಳಿದಾಗ ಆರೋಪಿಯು ಚಾಸಾ-1 ರವರನ್ನು ಕುರಿತು ಬೋಳಿಮಗನೆ, ಸೂಳೆಮಗನೆ ನಾನು ಜಾಗ ಬಿಡುವವರೆವಿಗೂ ಕಾಯೋ ಮಗನೆ ನಿನಗೆ ದುರಹಂಕಾರ ಎಂದು ಅವಾಚ್ಯ ಶಬ್ದಗಳಿಂದ ಬೈದು ಕೊರಳಪಟ್ಟಿಯನ್ನು ಹಿಡಿದು ಕೆಳಗೆ ಎಳೆದುಕೊಂಡು ಕೈಗಳಿಂದ ಕಪಾಳಕ್ಕೆ

ಹೊಡೆದು, ಕಾಲುಗಳಿಂದ ಬಲತೊಡೆಯ ಮೇಲೆ ಹೊಡೆದು, ಎಡಭುಜದ ಮೇಲೆ ಮತ್ತು ಹೊಟ್ಟೆಯ ಭಾಗದಲ್ಲಿ ತುಳಿದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿದ್ದು, ಆರೋಪಿತರು ಅಪರಾಧ ಮಾಡಬೇಕೆನ್ನುವ ಸಮಾನ ಉದ್ದೇಶದಿಂದ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಯನ್ನುಂಟು ಮಾಡಿರುತ್ತಾರೆ ಎಂದು ಚಾಸಾ.1 ರವರು ನೀಡಿದ ದೂರಿನನ್ವಯ ಪೊಲೀಸರು ಭಾ.ದ.ಸಂ.323, 504, 353 ಸಹವಾಚಕ 34 ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಮೇಲ್ಕಾಣಿಸಿದ ಅಪರಾಧಗಳ ಕಲಂನಡಿಯಲ್ಲಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**3.** ನ್ಯಾಯಾಲಯವು ದೋಷಾರೋಪಣೆ ಪತ್ರವನ್ನು ಸ್ವೀಕರಿಸಿ, ಪರಿಶೀಲಿಸಿ ನಂತರ ಸಂಜ್ಞಾನವನ್ನು ತೆಗೆದುಕೊಂಡಿರುತ್ತದೆ, ನ್ಯಾಯಾಲಯದಿಂದ ಆದೇಶಿಕೆಯನ್ನು ಹೊರಡಿಸಲಾಗಿ ಆರೋಪಿತರು ತಮ್ಮ ವಕೀಲರ ಮುಖಾಂತರ ಬಂದು ಹಾಜರಾಗಿರುತ್ತಾರೆ ಮತ್ತು ಜಾಮೀನು ಅರ್ಜಿಯನ್ನು ಸಲ್ಲಿಸಿಕೊಂಡು ಜಾಮೀನು ಪಡೆದುಕೊಂಡಿರುತ್ತಾರೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207ರ ಅಡಿಯಲ್ಲಿ ತಿಳಿಸಿದಂತೆ ಪ್ರಕರಣದ ದಾಖಲೆಗಳನ್ನು ಆರೋಪಿತರಿಗೆ ಕೊಡಲಾಯಿತು. ಆರೋಪ ರಚಿಸುವ ಮುನ್ನ ಆರೋಪಿತರಿಗೆ ತಮ್ಮ ಅಹವಾಲನ್ನು ಹೇಳಲು ಅವಕಾಶ ಕೊಡಲಾಯಿತು, ಆಮೇಲೆ ಆರೋಪಿತರ ವಿರುದ್ಧ ಆರೋಪವನ್ನು ರಚಿಸಲಾಯಿತು. ಆರೋಪಿತರು ತಮ್ಮ ವಿರುದ್ಧದ ದೋಷಾರೋಪಣೆ ಅಥವಾ ಆರೋಪವನ್ನು ಅಲ್ಲಗಳೆದಿರುವ ಕಾರಣ ಅದನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯು ಒಟ್ಟು 9 ಜನರ ಸಾಕ್ಷ್ಯವನ್ನು ಸಾಕ್ಷಿಪಟ್ಟಿಯಲ್ಲಿ ಗುರುತಿಸಿಕೊಂಡಿದ್ದು,

ಅದರಲ್ಲಿ 8 ಜನ ಸಾಕ್ಷಿದಾರರನ್ನು ಪ್ರಾಸಾ.1 ರಿಂದ 8 ಎಂದು ವಿಚಾರಣೆಗೆ ಒಳಪಡಿಸಿದ್ದು. ಒಟ್ಟು 6 ದಾಖಲೆಗಳನ್ನು ಕ್ರಮವಾಗಿ ನಿಪಿ.1 ರಿಂದ ನಿಪಿ.6 ಎಂದು ಗುರುತಿಸಿಕೊಂಡಿರುತ್ತಾರೆ. ನಿಪಿ.1 ದೂರು , ನಿಪಿ.2 ಪಂಚನಾಮೆ, ನಿಪಿ.3 ಗಾಯಾದ ಪ್ರಮಾಣ ಪತ್ರ, ನಿಪಿ.4 ಪ್ರ.ವ.ವರದಿ , ನಿಪಿ. ಕರ್ತವ್ಯ ದೃಢಿಕರಣ ಪತ್ರ, ನಿಪಿ.6 ಲಾಗ್ ಶೀಟ್ ಆಗಿರುತ್ತದೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಯಿತು. ಆರೋಪಿತರ ಪರವಾಗಿ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ಹೀಗಾಗಿ ಪ್ರಕರಣವನ್ನು ವಾದ-ವಿವಾದಕ್ಕೆ ಮುಂದೂಡಲಾಯಿತು.

**4.** ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಆರೋಪಿತರ ಪರ ವಕೀಲರ ವಾದ-ವಿವಾದಗಳನ್ನು ಆಲಿಸಲಾಯಿತು. ಆರೋಪಿ ಪರ ವಕೀಲರು ತಮ್ಮ ಪರವಾಗಿ ಲಿಖಿತವಾದ ಮಂಡನೆಯನ್ನು ಸಲ್ಲಿಸುವುದರ ಜೊತೆಗೆ ಈ ಕೆಳಕಂಡ ತೀರ್ಪುಗಳನ್ನು ತಮ್ಮ ಪರವಾಗಿ ಅವಲಂಬಿಸಿರುತ್ತಾರೆ .

1. Kali Ram V/s. State of Himachal Pradesh.

2.Case NO. 745/2000 ( State of Rajasthan V/s. Kashi Ram)

3. Subhash V/s. State of Haryana and others

4.Vadivelu Thevar V/s. The State of Madras

5. Case No.914/2006 ( Namdeo V/s. State of Maharastra)

6.Tahsildar Singh and Another V/s. The state of Uttar pradesh

7.Crl. Appeal No.1288/2007 ( Jarnail Singh and others V/s. State of Punjab)

8. Durgacharan Naik and others V/s. State of Orissa

9.Crl. Appeal No. 6449/2014 ( Manik Taneja and Another V/s. State of Karnataka and another)

10. Ram Narain Singh V/s. State of Punjab

11. Karnel Singh V/s. The state of M.P

12. State of Punjab V/s. Baldev Singh.

13. Pandurang, Tukia And Bhillia V/s. The State of Hyderabad.

14.Crl. Appeal No.34/2006 ( Mahendra Pratap Singh V/s. State of Uttar Pradesh. ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಯಿತು. ಈ ಕೆಳಗಿನ ಅಂಶಗಳು ನನ್ನ ಪರ್ಯಾಲೋಚನೆಗೆ ಉದ್ಭವಿಸಿರುತ್ತವೆಃ

**ಅಂಶ.1-** ದಿನಾಂಕ 23.07.2019 ರಂದು ಬೆಳಿಗ್ಗೆ 07.30 ರ ಸಮಯದಲ್ಲಿ, ಕುಣಿಗಲ್ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕುಣಿಗಲ್ ಟೌನ್ ನ ಕುಣಿಗಲ್ - ಮೈಸೂರು ಸರ್ಕಲ್ ಬಳಿ ಇರುವ ಕರ್ನಾಟಕ ಸ್ಟೀಲ್ ಅಂಗಡಿಯ ಮುಂಭಾಗದ ರಸ್ತೆಯ ಬಲಭಾಗದಲ್ಲಿ

KATK510024132019



1ನೇ ಆರೋಪಿಯು ಎಂ.ಎಂ.ಟ್ರಾವೆಲ್ ವಾಹನವನ್ನು ನಿಲ್ಲಿಸಿದ್ದು, ಅದೇ ಸಮಯಕ್ಕೆ ಚಾಸಾ-1 ರವರು ಕೆ.ಎ-06-ಎಫ್-964 ರ ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ಕುಣಿಗಲ್ ಘಟಕದ ವಿಭಾಗದ ಡಿಪೋಗೆ ತೆಗೆದುಕೊಂಡು ಹೋಗಲು ವಾಹನವನ್ನು ಚಾಲನೆ ಮಾಡಿಕೊಂಡು ಬಂದು ಹಾರನ್ ಮಾಡಿದರೂ 1ನೇ ಆರೋಪಿಯು ವಾಹನವನ್ನು ಪಕ್ಕಕ್ಕೆ ಸರಿಸದೇ ಇದ್ದಾಗ, ರಸ್ತೆಯನ್ನು ಬಿಟ್ಟು ಪಕ್ಕಕ್ಕೆ ಹೋಗು ಅಂತ ಚಾಸಾ-1 ರವರು 1ನೇ ಆರೋಪಿಗೆ ಹೇಳಿದಾಗ ಆರೋಪಿಯು ಚಾಸಾ-1 ರವರನ್ನು ಕುರಿತು ಬೋಳಿಮಗನೆ, ಸೂಳೆಮಗನೆ ನಾನು ಜಾಗ ಬಿಡುವವರೆವಿಗೂ ಕಾಯೋ ಮಗನೆ ನಿನಗೆ ದುರಹಂಕಾರ ಎಂದು ಅವಾಚ್ಯ ಶಬ್ಧಗಳಿಂದ ಬೈದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **504 ಸಹ ವಾಚಕ ಕಲಂ 34** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ರುಜುವಾತುಪಡಿಸಿರು ತ್ತಾರೆಯೇ?

**ಅಂಶ.2-** ಮೇಲ್ಕಂಡ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿಗಳು ಏಕೋದ್ದೇಶದಿಂದ ಆರೋಪಿತರು ಚಾಸಾ.1 ರವರ ಕೊರಳಪಟ್ಟಿಯನ್ನು ಹಿಡಿದು ಕೆಳಗೆ ಎಳೆದುಕೊಂಡು ಕೈಗಳಿಂದ ಕಪಾಳಕ್ಕೆ ಹೊಡೆದು, ಕಾಲುಗಳಿಂದ ಬಲತೊಡೆಯ ಮೇಲೆ ಹೊಡೆದು, ಎಡಭುಜದ ಮೇಲೆ ಮತ್ತು ಹೊಟ್ಟೆಯ ಭಾಗದಲ್ಲಿ ತುಳಿದು ಸಾಮಾನ್ಯ ಸ್ವರೂಪದ

ನೋವನ್ನುಂಟು ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **323 ಸಹ ವಾಚಕ ಕಲಂ 34** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ರುಜುವಾತುಪಡಿಸಿರುತ್ತಾರೆಯೇ?

**ಅಂಶ.3-** ಮೇಲ್ಕಂಡ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿತರು ಅಪರಾಧ ಮಾಡಬೇಕೆನ್ನುವ ಸಮಾನ ಉದ್ದೇಶದಿಂದ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಯನ್ನುಂಟು ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **353 ಸಹ ವಾಚಕ ಕಲಂ 34** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ರುಜುವಾತುಪಡಿಸಿರುತ್ತಾರೆಯೇ?

**ಅಂಶ.4-** ಆದೇಶವೇನು ?

**5.** ಈ ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರವು ಈ ಕೆಳಕಂಡ ಕಾರಣಗಳಂತೆ ಇರುತ್ತದೆಃ

ಅಂಶ-1- **ನಕಾರಾತ್ಮಕವಾಗಿ,**

ಅಂಶ-2 - **ನಕಾರಾತ್ಮಕವಾಗಿ,**

ಅಂಶ-3 -**ನಕಾರಾತ್ಮಕವಾಗಿ,**

ಅಂಶ-4 - ಈ ಕೆಳಕಂಡ ಕಾರಣಗಳಿಗಾಗಿ

ಅಂತಿಮ ಆದೇಶದಂತೆ,

## ಕಾರಣಗಳು

***6.*** **ಅಂಶ-1ರಿಂದ 3 -** ಈ ನಾಲ್ಕು ಅಂಶಗಳು ಒಂದಕ್ಕೊಂದು ಪೂರಕವಾಗಿದ್ದು ಒಂದೇ ಘಟನೆಗೆ ಸಂಬಂಧಪಟ್ಟಿದ್ದುದರಿಂದ, ಸದರಿ ಮೂರು ಅಂಶಗಳನ್ನು ಒಟ್ಟಿಗೆ ಗಮನಕ್ಕೆ ತೆಗೆದುಕೊಂಡಿರುತ್ತೇನೆ.

**7.** ಈ ಪ್ರಕರಣದಲ್ಲಿ ಅಭಿಯೋಜನೆಯು ದೂರದಾರ ಸಾಕ್ಷಿದಾರರಾದ ಚಾಸಾ.1 ರವರನ್ನು ಪ್ರಾಸಾ.1 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.1 ಶಶಿಧರ್ ಹೆಚ್.ಜೆ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ: 23.07.2019 ರಂದು ಯಡವಾಣಿಯಿಂದ ಅಮೃತೂರಿಗೆ ಬರುವ ದಾರಿಯಲ್ಲಿ ಕುಣಿಗಲ್ ಟೌನ್ ನ ಸಿವಿಲ್ ಬಸ್ ನಿಲ್ದಾಣದ ಬಳಿ ಪ್ರಯಾಣಿಕರನ್ನು ಇಳಿಸಿ ಸ್ವಲ್ಪ ಮುಂದೆ ಸ್ಟೀಲ್ ಅಂಗಡಿಯ ಮುಂದೆ ಬಸ್ ಬರುವಾಗ ಒಬ್ಬ ಹುಡುಗ ಬಲಭಾಗದಲ್ಲಿ ಎಂ.ಎಂ.ಬಸ್ ನ ಕಂಡಕ್ಟರ್ ಜೊತೆ ಮಾತನಾಡುತ್ತಿದ್ದು, ತಾನು ಜಾಗ ಕೇಳಿ ಹಾರ್ನ್ ಮಾಡಿದಾಗ ಬಸ್ ಮಾಲೀಕರ ಮಗ ಪಕ್ಕಕ್ಕೆ ಹೋಗದೇ ಇದ್ದಾಗ ಮತ್ತೆ ತಾನು ಹಾರ್ನ್ ಮಾಡಿ, ಕಿವಿ ಕೇಳಿಸುವುದಿಲ್ಲವಾ ಎಂದು ತಾನು ಹೇಳಿದಾಗ ಅವನು ಸೂಳೇ ಮಗನೇ, ನಿನಗೆ ದುರಹಂಕಾರ ಹೆಚ್ಚು ಎಂದು ಬೈದಿದ್ದು, ತಾನು ಬಸ್ ನಿಂದ ಇಳಿದು ಏಕೆ ಬೈಯುತ್ತಿಯಾ ಎಂದು ಕೇಳಿದಾಗ ಆ ಹುಡುಗನ ತಂದೆ ಬಂದು ತನ್ನ ಬಲಗಪಾಲಕ್ಕೆ ಹೊಡೆದರು ಜೊತೆಗೆ ಇನ್ನಿಬ್ಬರು ಆಸಾಮಿಗಳು ಬಂದು ಒಟ್ಟು 4 ಜನರು ತನ್ನನ್ನು ಕೆಳಕ್ಕೆ ಬಿಳಿಸಿ ಕಾಲಿನಿಂದ ಒದ್ದು, ಕೈಯಿಂದ ಹೊಡೆದಿದ್ದು , ಅಷ್ಟರಲ್ಲಿ ಜನರು ತನ್ನನ್ನು ಬಿಡಿಸಿ, ನಂತರ ಅಪ್ಪ

ಮಗನನ್ನು ತಮ್ಮ ಬಸ್ ನಲ್ಲಿಯೇ ಹತ್ತಿಸಿಕೊಂಡು ಪೋಲಿಸ್‌ನವರಿಗೆ ಒಪ್ಪಿಸಿದ್ದು , ನಂತರ ತಾನು ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದ ನಂತರ ನಿಪಿ.1 ರಂತೆ ದೂರು ನೀಡಿದ್ದು, ಸಂಜೆ ತಾನು ಗಾಡಿಯನ್ನು ಬಿಡಿಸಿಕೊಂಡು ಬಂದಿದ್ದು, ಪೋಲಿಸರು ಸ್ಥಳಕ್ಕೆ ಬಂದು ನಿಪಿ.2 ರಂತೆ ಸ್ಥಳ ಪಂಚನಾಮೆಯನ್ನು ಮಾಡಿರುವುದಾಗಿ ನುಡಿದಿರುತ್ತಾರೆ.

8. ಪ್ರಾಸಾ-1 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿಯವರು ತಮ್ಮ ಬಸ್ ನಲ್ಲಿ ಎಷ್ಟು ಜನ ಪ್ರಯಾಣಿಕರಿದ್ದರು ಎಂದು ತೋರಿಸಲು ಕೌಂಟರ್ ಫೈಲ್ ಗಳನ್ನು ನೀಡಿರುವುದಿಲ್ಲ, ಕರ್ನಾಟಕ ಸ್ಟೀಲ್ ಅಂಗಡಿಯ ಮುಂಭಾಗ ಯಾವುದೇ ಪಾರ್ಕಿಂಗ್ ಸ್ಥಳ ಇರುವುದಿಲ್ಲ ಹಾಗೂ ಅಲ್ಲಿ ಯಾವುದೇ ಬಸ್ ನಿಲುಗಡೆ ಸ್ಥಳ ಇರುವುದಿಲ್ಲ, ಸದರಿ ಜಾಗದಲ್ಲಿ ವಾಹನ ನಿಲುಗಡೆ ಮಾಡಿದರೆ ಪೋಲಿಸರು ದಂಡ ವಿಧಿಸುತ್ತಾರೆ, ತಾನು ಪೋಲಿಸರಿಗೆ ಯಾವುದೇ ಮರು ಹೇಳಿಕೆ ನೀಡಿರುವುದಿಲ್ಲ, ತಾನು ಆ ದಿನ ಮೊದಲು ಆಸ್ಪತ್ರೆಗೆ ಹೋಗಿ ನಂತರ ಠಾಣೆಗೆ ಹೋಗಿದ್ದು, ನಿಪಿ.2 ಕ್ಕೆ ತಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದು, ನಿಪಿ.2 ರ ವೇಳೆಯಲ್ಲಿ ಇನ್ನು ಯಾರು ಸಹಿ ಮಾಡಿರುತ್ತಾರೆ ಎಂದು ತನಗೆ ಗೊತ್ತಿಲ್ಲ, ಆ ದಿನ ಸಮವಸ್ತ್ರ ಹರಿದಿರಲಿಲ್ಲ, ತನ್ನ ಸಮವಸ್ತ್ರದ ಗುಂಡಿಗಳು ಕಿತ್ತು ಹೋಗಿರಲಿಲ್ಲ,ನಿಪಿ.2 ರಲ್ಲಿ ವೈಟ್ನರ್ ಹಾಕಿರುವ ಬಗ್ಗೆ ತನಗೆ ಗೊತ್ತಿಲ್ಲ, ನಿಪಿ.1ರಲ್ಲಿ ತಮ್ಮ ಬಸ್ಸಿನ ಪ್ರಯಾಣಿಕರಿಗೆ ಬೇರೆ ಬಸ್ಸಿಗೆ ಹೋಗಲು ವ್ಯವಸ್ಥೆ ಮಾಡಲಾಗಿತ್ತು ಎಂದು ತಾನು ಬರೆಸಿರುವುದಿಲ್ಲ, ತನಗೆ ಕರ್ತವ್ಯದ ಲಾಗ್ ಪುಸ್ತಕವನುನ ದೂರು ನೀಡುವ ದಿನವೇ ಪೋಲಿಸರಿಗೆ ನೀಡಿದ್ದೆ, ಸದರಿ ಲಾಗ

ಪುಸ್ತಕದ ದಾಖಲೆಗೆ ತಾನು ಮತ್ತು ನಿರ್ವಾಹಕರು ಸಹಿ ಮಾಡಿ ನೀಡಿರಲಿಲ್ಲ,ಚಾಸಾ.5 ತನ್ನ ಸೋದರ ಮಾವ ಮತ್ತು ಚಾಸಾ.4 ರವರು ತನ್ನ ಸಹೋದರ ಎಂದು ನುಡಿದಿರುತ್ತಾರೆ.

**9**. ಈ ಪ್ರಕರಣದಲ್ಲಿ ಅಭಿಯೋಜನೆಯು ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ.**2** ರವರನ್ನು ಪ್ರಾಸಾ.**2** ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ**.** ಪ್ರಾಸಾ.**2** ಚನ್ನವೀರಗೌಡ ಡಿ.ಆರ್ ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರನ್ನು ತಾನು ನೋಡಿದ್ದು, ದಿನಾಂಕಃ 23.07.2019 ರಂದು ಯಡವಾಡಿಯಿಂದ ಅಮೃತೂರಿಗೆ ಬರುವ ದಾರಿಯಲ್ಲಿ ಕುಣಿಗಲ್ ಟೌನ್ ನ ಸಿವಿಲ್ ಬಸ್ ನಿಲ್ದಾಣದ ಬಳಿ ಪ್ರಯಾಣಿಕರನ್ನು ಇಳಿಸಿ ಸ್ವಲ್ಪ ಮುಂದೆ ಕರ್ನಾಟಕ ಸ್ಟೀಲ್ ಅಂಗಡಿಯ ಮುಂದೆ ಬೆಳಿಗ್ಗೆ 7.30 ರ ಸಮಯದಲ್ಲಿ ಬರುತ್ತಿರುವಾಗ್ಗೆ, 2ನೇ ಆರೋಪಿ ರಸ್ತೆಯಲ್ಲಿ ಎಂ.ಎಂ.ಬಸ್ ನ ಚಾಲಕನ ಜೊತೆ ಮಾತನಾಡುತ್ತಿದ್ದು , ಆಗ ಚಾಸಾ.1 ರವರು ಜಾಗ ಕೇಳಿ ಹಾರ್ನ್ ಮಾಡಿದ್ದು, ಸ್ವಲ್ಪ ಹೊತ್ತಿನ ನಂತರ ಅವರು ಬಸ್ಸನ್ನು ತೆಗೆದಿದ್ದು ,ನಂತರ 2ನೇ ಆರೋಪಿ ಚಾಸಾ.1 ರವರಿಗೆ ನಿಮ್ಮದು ಜಾಸ್ತಿಯಾಯಿತು ಸೂಳೆ ಮಗನೇ, ಬೋಳಿಮಗನೇ ಎಂದು ಬೈದಿದ್ದು, ಆಗ ಚಾಸಾ.1 ರವರು ಏಕೆ ಬೈಯುತ್ತಿಯಾ ಎಂದು ಬಸ್ಸಿನಿಂದ ಕೆಳಗೆ ಇಳಿದು ಕೇಳಿದಾಗ 2ನೇ ಆರೋಪಿ ಚಾಸಾ.1 ರವರ ಕಿವಿಗೆ, ಹೊಟ್ಟೆಗೆ, ಎದೆಗೆ ಹೊಡೆದಿದ್ದು , ನಂತರ 1ನೇ ಆರೋಪಿ ಮತ್ತು ಇನ್ನಿಬ್ಬರು ಬಂದು ಚಾಸಾ.1 ರವರನ್ನು ಕೆಳಕ್ಕೆ ಬಿಳಿಸಿ ಕಾಲಿನಿಂದ ಒದ್ದಿದ್ದು, ಅಷ್ಟರಲ್ಲಿ ಜನರು ಜಗಳ ಬಿಡಿಸಿದ್ದು , ನಂತರ 1 ಮತ್ತು 2 ನೇ ಆರೋಪಿತರನ್ನು

ತಮ್ಮ ಬಸ್ ನಲ್ಲಿಯೇ ಹತ್ತಿಸಿಕೊಂಡು ಪೋಲಿಸ್ ಠಾಣೆಗೆ ಹೋಗಿದ್ದಾಗಿ, ತದನಂತರ ಚಾಸಾ.1 ರವರು ದೂರು ನೀಡಿದ್ದು, ತಾನು ಘಟನೆಯ ಕುರಿತು ಪೋಲಿಸರಿಗೆ ಹೇಳಿಕೆ ನೀಡಿರುವುದಾಗಿ ನುಡಿದಿರುತ್ತಾರೆ .

**10.** ಆರೋಪಿ ಪರ ವಕೀಲರು ಪ್ರಾಸಾ-2 ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ಸದರಿಯವರು ಪಾಟೀಸವಾಲಿನಲ್ಲಿ ತಮ್ಮ ಬಸ್ಸ್ ಗೆ ನಿಲ್ದಾಣ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ನಿಲುಗಡೆ ಸ್ಥಳ, ಅಲ್ಲಿ ಜನರನ್ನು ಇಳಿಸಬೇಕಾದ ಕಾರಣ ಇಳಿಸಬೇಕಲ್ಲ ಎಂದು ನುಡಿದಿದ್ದು, ತಾನು ಹಿಂಭಾಗದಲ್ಲಿ ಇದ್ದ ಕಾರಣ, ಬಸ್ ನ ಬಲಭಾಗದಲ್ಲಿ ಆಗುತ್ತದೆ ಎಂದ ಕಾಣುವುದಿಲ್ಲ, ಚಾಸಾ.1 ರವರು ಬಸ್ಸಿನಿಂದ ತಾವೇ ಕೆಳಗೆ ಇಳಿದು ಏಕೆ ಬೈಯುತ್ತೀರಾ ಎಂದು ಕೇಳಿದ್ದು, ಚಾಸಾ.1 ರವರಿಗೆ 4 ಜನ ಆರೋಪಿತರು ಹೊಡೆದಿದ್ದು, ತಾವು ಮೊದಲು ಆರೋಪಿರನ್ನು ಠಾಣೆಗೆ ಬಿಟ್ಟು ಆಸ್ಪತ್ರೆಗೆ ಹೋಗಿದ್ದಾಗಿ, ತಮ್ಮ ಮೇಲಾಧಿಕಾರಿಗಳೂ ಸಹ ಘಟನೆಯ ಬಗ್ಗೆ ನಿವೇದನೆ ಸಲ್ಲಿಸಿದ್ದು, ಪೋಲಿಸರು ಘಟನಾ ದಿನವೇ ತನ್ನ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ.

**11.** ಈ ಪ್ರಕರಣದಲ್ಲಿ ಅಭಿಯೋಜನೆಯು ಮತ್ತೋರ್ವ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ.**3** ರವರನ್ನು ಪ್ರಾಸಾ.**3** ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ**.** ಪ್ರಾಸಾ.**3** ವೆಂಕಟರಮಣ ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರನ್ನು ತಾನು ನೋಡಿದ್ದು, ಆರೇಳು ವರ್ಷಗಳ ಹಿಂದೆ ಕುಣಿಗಲ್ ನ ಕರ್ನಾಟಕ ಸ್ಟೀಲ್ ಅಂಗಡಿಯ ಮುಂದೆ ಬೆಳಿಗ್ಗೆ 7.30 ರ ಸಮಯದಲ್ಲಿ ಸರ್ಕಾರಿ ಬಸ್ ಚಾಲಕನಿಗೆ 1 ಮತ್ತು 2ನೇ ಆರೋಪಿತರು ಮತ್ತು ಇನ್ನಿಬ್ಬರು ಕೈಯಿಂದ ಹೊಡೆಯುತ್ತಿದ್ದು, ಸದರಿ ಜಗಳವನ್ನು ತಾನು ನೋಡಿದ್ದು,

ಸದರಿ ಜಗಳವನ್ನು ತಾನು ಬಿಡಿಸಿರುವುದಿಲ್ಲ, ಆ ಜಗಳವನ್ನು ಸ್ಥಳದಲ್ಲಿದ್ದ ಜನರು ಬಿಡಿಸಿದ್ದು , ಆ ಜಗಳವನ್ನು ತನಗೆ ಗೊತ್ತಿರುವವರು ಯಾರು ಬಿಡಿಸಿರುವುದಿಲ್ಲ, ತಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ

**12.** ಪ್ರಾಸಾ-**3** ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿ ಜಾಗದಲ್ಲಿ ಒಂದು ವಾಹನ ನಿಂತರೇ, ಮತ್ತೊಂದು ವಾಹನ ಪಕ್ಕದಲ್ಲಿ ಹೋಗಬಹುದು ಎನ್ನುವ ಸೂಚನೆಯನ್ನು ಒಪ್ಪಿರುತ್ತಾರೆ.

**13.** ಈ ಪ್ರಕರಣದಲ್ಲಿ ಅಭಿಯೋಜನೆಯು ಮತ್ತೋರ್ವ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ.**4** ರವರನ್ನು ಪ್ರಾಸಾ.**4** ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.**4** ರಂಗಸ್ವಾಮಿ ವೈ.ಹೆಚ್ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 23.07.2019 ರಂದು ಬೆಂಗಳೂರು ರಸ್ತೆಯಲ್ಲಿರುವ steel ಅಂಗಡಿ ಬಳಿ ತಾನು ಮತ್ತು ತನ್ನ ಮಾವನಾದ ಚಿಕ್ಕಣ್ಣ ಹೂವು ವ್ಯಾಪಾರ ಮಾಡುತ್ತಿದ್ದು, ಆಗ ಸರ್ಕಾರಿ ಬಸ್ ಬಂದಾಗ, 1ನೇ ಆರೋಪಿ ಮಗ ಬಸ್ಸನ್ನು ಬೆಳಿಗ್ಗೆ 7.30 ರ ಸಮಯದಲ್ಲಿ ಅಡ್ಡಹಾಕಿದ್ದು, ಆಗ ಸರ್ಕಾರಿ ಬಸ್ ನ ಚಾಲಕ ಹಾರ್ನ್ ಮಾಡಿ ಸೈಡ್ ಗೆ ಹೋಗಲು ಎಂದು ಹೇಳಿದಾಗ, 1ನೇ ಆರೋಪಿಯ ಮಗ ಸೈಡಿಗೆ ಹೋಗಲಿಲ್ಲ, ಆಗ ಸರ್ಕಾರಿ ಬಸ್ ಚಾಲಕನಾದ ಚಾಸಾ.1 ರವರು ಕೆಳಗೆ ಇಳಿದು, ಏಕೆ ಬಸ್ ಅಡ್ಡ ಹಾಕಿದ್ದೀಯಾ ಎಂದು ಕೇಳಿದಾಗ , 1ನೇ ಆರೋಪಿ ಮತ್ತು ಆತನ ಮಗ ಚಾಸಾ.1 ರವರಿಗೆ ಹೊಲಸು ಮಾತನಾಡಿ, 1ನೇ ಆರೋಪಿ, ಆತನ ಮಗ ಮತ್ತಿಬ್ಬರು ಚಾಸಾ.1 ರವರಿಗೆ ಕೊರಳ ಪಟ್ಟಿ

ಹಿಡಿದು, ಮುಖಕ್ಕೆ, ಕೈಗೆ, ತೊಡೆಗೆ ಹೊಡೆದಿದ್ದು, ಆಗ ತಾನು ಮತ್ತು ತನ್ನ ಮಾವ ಹೋಗಿ ಜಗಳ ಬಿಡಿಸಿದ್ದು, ಅಷ್ಟರಲ್ಲಿ 1ನೇ ಆರೋಪಿ ಮತ್ತು ಆತನ ಮಗನನ್ನು ಬಿಟ್ಟು ಉಳಿದಿಬ್ಬರು ಹೊರಟು ಹೋಗಿರುವುದಾಗಿ, ನಂತರ 1ನೇ ಆರೋಪಿ ಮತ್ತು ಆತನ ಮಗನನ್ನು ಅದೇ ಬಸ್ಸಿ ನಲ್ಲಿ ಠಾಣೆಗೆ ಕಳುಹಿಸಿದ್ದು, ಚಾಸಾ.1 ರವರ ಬಸ್ ಸಂ.ಕೆಎ-06ಎಫ್-964 ಆಗಿದ್ದು, ಚಾಸಾ.1 ರವರನ್ನು ಹೊಡೆದವರನ್ನು ತಾನು ಗುರುತಿಸುವುದಾಗಿ, ಚಾಸಾ.1 ರವರನ್ನು ಹೊಡೆದವರಲ್ಲಿ 1ನೇ ಆರೋಪಿಯ ಮಗ ನ್ಯಾಯಾಲಯದಲ್ಲಿದ್ದು, ತಾನು ಪೊಲೀಸರಿಗೆ ಘಟನೆಯ ಕುರಿತು ಹೇಳಿಕೆ ನೀಡಿರುವುದಾಗಿ ನುಡಿದಿರುತ್ತಾರೆ.

**14.** ಪ್ರಾಸಾ**-4** ರವರನ್ನು ಅಭಿಯೋಜನೆಯವರು ಪಾಟೀ ಸವಾಲಿಗೆ ಒಳಪಡಿಸಿದ್ದು**,** ಇವರು ತಮ್ಮ ಪಾಟೀ ಸವಾಲಿನಲ್ಲಿ**,** ಸದರಿ ರಸ್ತೆಯಲ್ಲಿ ಒಂದೇ ಬಾರಿಗೆ ಎರಡು ಬಸ್ಸು ಮತ್ತು ಒಂದು ಕಾರು ಹೋಗಬಹುದಾಗಿದ್ದು**,** ಘಟನೆಯಲ್ಲಿ ಚಾಸಾ**.1** ರವರ ಅಂಗಿಯ ಎರಡು ಗುಂಡಿಗಳು ಕಿತ್ತು ಹೋಗಿದ್ದು**,** ಸದರಿ ಹೇಳಿಕೆಯಲ್ಲಿ ಪೋಲಿಸರು ಏನು ಬರೆದಿರುತ್ತಾರೆ ಎಂದು ತನಗೆ ಗೊತ್ತಿಲ್ಲ**,** ಸಹಿ ಮಾಡಲು ಹೇಳಿದಕ್ಕೆ ತಾನು ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ**.**

**15.** ಆರೋಪಿ ಪರ ವಕೀಲರು ಪ್ರಾಸಾ**-4** ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು**,** ಸದರಿಯವರು ಪಾಟೀಸವಾಲಿನಲ್ಲಿ ಚಾಸಾ**.1** ಮತ್ತು ತಾನು ಒಂದೇ ಊರಿನವರಾಗಿದ್ದು**,** ಚಾಸಾ**.1** ರವರು ನನ್ನ ಸೋದರ ಮಾವನ ಮಗ ಎಂದು ನುಡಿದಿರುತಾರೆ**.**

**16.** ಈ ಪ್ರಕರಣದಲ್ಲಿ ಅಭಿಯೋಜನೆಯು ಮಹಜರ್ ಸಾಕ್ಷಿದಾರರಾದ ಚಾಸಾ.**5** ರವರನ್ನು ಪ್ರಾಸಾ.**5** ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.**5** ರಂಗಪ್ಪ ಕೆ.ಎ ರವರು ತಮ್ಮ ಸಾಕ್ಷ್ಯದಲ್ಲಿ ನಿಪಿ.2 ರ ಸ್ಥಳ ಪಂಚನಾಮೆಗೆ ದಿನಾಂಕ 23.07.2019ರಂದು ಸುಮಾರು 2 ಅಥವಾ 2.30 ರ ಸಮಯದಲ್ಲಿ ಗ್ರಾಮದೇವತೆ ದೇವಸ್ಥಾನದ ಹತ್ತಿರ ಕೆ ಎಸ್ ಆರ್ ಟಿ ಸಿ ಬಸ್ ಚಾಲಕ ಮತ್ತು ವ್ಯಾನ್ ಚಾಲಕ ಗಲಾಟೆ ಮಾಡಿಕೊಂಡಿರುವ ವಿಚಾರವಾಗಿ ಸಹಿ ಮಾಡಿದ್ದು, ಆ ಸಮಯದಲ್ಲಿ ತನ್ನ ಜೊತೆ ಚಾಸಾ.6 ರವರು ಸಹಿ ಮಾಡಿರುದಾಗಿ ನುಡಿದಿರುತ್ತಾರೆ.

**17**. ಆರೋಪಿ ಪರ ವಕೀಲರು ಪ್ರಾಸಾ**-5** ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ಸದರಿಯವರು ಪಾಟೀಸವಾಲಿನಲ್ಲಿ ನಿಪಿ.**2** ರ ವಿಚಾರವನ್ನು ಠಾಣೆಯಲ್ಲಿ ಸಹಿ ಮಾಡುವಾಗ ಹೇಳಿದ್ದು, ಈ ಪ್ರಕರಣದ ಘಟನೆಯ ಬಗ್ಗೆ ಏನು ಗೊತ್ತಿಲ್ಲ, ಚಾಸಾ.**1** ರವರು ತನ್ನ ಸೋದರ ಅಳಿಯ ಎನ್ನುವ ಸೂಚನೆಯನ್ನು ಒಪ್ಪಿ ತಾನು ಅವರ ದೂರದ ಸಂಬಂಧಿ ಎಂದು ನುಡಿದಿರುತ್ತಾರೆ.

**18.** ಈ ಪ್ರಕರಣದಲ್ಲಿ ಅಭಿಯೋಜನೆಯು ಮತ್ತೋರ್ವ ಮಹಜರ್ ಸಾಕ್ಷಿದಾರರಾದ ಚಾಸಾ.**6** ರವರನ್ನು ಪ್ರಾಸಾ.**6** ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.**6** ರಂಗನಾಥ ಕೆ ರವರು ತಮ್ಮ ಸಾಕ್ಷ್ಯದಲ್ಲಿ ನಿಪಿ.**2** ಸ್ಥಳ ಪಂಚನಾಮೆಗೆ ತಾನು ಠಾಣೆಯಲ್ಲಿ ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದು, ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿಲ್ಲ, ಪೋಲಿಸರು ಘಟನಾ ಸ್ಥಳವಾದ ಕರ್ನಾಟಕ ಸ್ಟೀಲ್ ಅಂಗಡಿ ಬಳಿ ಪಂಚನಾಮೆ ಮಾಡಿ ಠಾಣೆಯಲ್ಲಿ ಸಹಿ ಪಡೆದಿದ್ದು,

ಆ ಸಮಯದಲ್ಲಿ ತನ್ನ ಜೊತೆ ಚಾಸಾ.**5** ರವರು ಅಂಗಡಿ ಮತ್ತು ಠಾಣೆಯ ಬಳಿ ಇದ್ದರು ಎಂದು ನುಡಿದಿರುತ್ತಾರೆ.

**19.** ಈ ಪ್ರಕರಣದಲ್ಲಿ ಅಭಿಯೋಜನೆಯು ವೈದ್ಯಾಧಿಕಾರಿ ಸಾಕ್ಷಿದಾರರಾದ ಚಾಸಾ.**7** ರವರನ್ನು ಪ್ರಾಸಾ.**7** ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.**7** ಡಾ.ಮಂಜುನಾಥ ಸ್ಮಾರಣ್ ಎಸ್ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 23.07.2019 ರಂದು ಸುಮಾರು ಬೆಳಿಗ್ಗೆ 7.45 ರ ಸಮಯದಲ್ಲಿ ಬಸ್ ನಿಲ್ದಾಣದ ವೃತ್ತದಲ್ಲಿ ಆದ ಹಲ್ಲೆಯ ಹಿನ್ನಲೆಯೊಂದಿಗೆ ಚಾಸಾ.1 ರವರು ತಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು , ಅವರನ್ನು 8.10 ಗಂಟೆಯ ಸಮಯದಲ್ಲಿ ಪರೀಕ್ಷಿಸಿದಾಗ ಎಡಭಾಗದ ಕೆನ್ನೆಯಲ್ಲಿ , ಬಲಗಾಲಿನ , ಎಡ ಭುಜದಲ್ಲಿ ನೋವು ಎಂದು ತಿಳಿಸಿದ್ದು, ಈ ಗಾಯಗಳಲ್ಲಿ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಚಾಸಾ.1 ರವರಿಗೆ ಗಾಯಗಳ ಕುರಿತು ನಿಪಿ.3 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುವುದಾಗಿ ನುಡಿದಿರುತ್ತಾರೆ.

**20**. ಆರೋಪಿ ಪರ ವಕೀಲರು ಪ್ರಾಸಾ-7 ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ಸದರಿಯವರು ಪಾಟೀಸವಾಲಿನಲ್ಲಿ ನಿಪಿ.3ರಲ್ಲಿ ನಮೂದಾಗಿರುವ ಗಾಯ ಸೈಕಲ್ ನಿಂದ ಜಲ್ಲಿಕಲ್ಲಿನ ರಸ್ತೆಯ ಮೇಲೆ ಬಿದ್ದರು ಆಗಬಹುದು ಎನ್ನುವ ಸೂಚನೆಯನ್ನು ಒಪ್ಪಿರುತ್ತಾರೆ.

**21.** ಈ ಪ್ರಕರಣದಲ್ಲಿ ಅಭಿಯೋಜನೆಯು ತನಿಖಾಧಿಕಾರಿ ಸಾಕ್ಷಿದಾರರಾದ ಚಾಸಾ.9 ರವರನ್ನು ಪ್ರಾಸಾ.8 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.8 ಮಂಜುನಾಥ ಆರ್ ರವರು

ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 23.07.2019 ರಂದು ಮಧ್ಯಾಹ್ನ 12.30ರ ಸಮಯಕ್ಕೆ ಚಾಸಾ.1 ರವರು ನೀಡಿದ ದೂರನ್ನು ನಿಪಿ.1 ರಂತೆ ಪಡೆದು ಪ್ರಕರಣವನ್ನು ದಾಖಲಿಸಿ ನಿಪಿ.4 ರಂತೆ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿದ್ದು, ನಂತರ ಅದೇ ದಿನ ಮಧ್ಯಾಹ್ನ 2.00-3.00 ರವರೆಗೆ ಕೃತ್ಯ ನಡೆದ ಸ್ಥಳಕೆ ಹೋಗಿ ಚಾಸಾ.5 ಮತ್ತು ಚಾಸಾ.6 ರವರ ಸಮಕ್ಷಮ ನಿಪಿ.2 ರಂತೆ ಸ್ಥಳ ಪಂಚನಾಮೆಯನ್ನು ಜರುಗಿಸಿ ಹಾಗೂ ಚಾಸಾ.1 ಮತ್ತು 2 ರವರ ಹೇಳಿಕೆಯನ್ನು ಪಡೆದಿದ್ದು, ನಂತರ ಚಾಸಾ.1 ರವರ ಕರ್ತವ್ಯ ನಿರ್ವಹಿಸುತ್ತಿದ್ದ ಬಗ್ಗೆ ಚಾಸಾ.8 ರವರಿಂದ ನಿಪಿ.5 ರಂತೆ ಕರ್ತವ್ಯ ದೃಢೀಕರಣ ಪತ್ರ ಮತ್ತು ನಿಪಿ.6 ರಂತೆ ಲಾಗ್ ಶೀಟ್ ಪಡೆದಿದ್ದು, ದಿನಾಂಕ 12.08.2019 ರಂದು ಚಾಸಾ.3 ಮತ್ತು 4 ರವರ ಹೇಳಿಕೆಯನ್ನು ಪಡೆದು, ನಂತರ 1 ಮತ್ತು 2 ಆರೋಪಿತರ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುವುದಾಗಿ, ದಿನಾಂಕ 06.09.2019 ರಂದು ಚಾಸಾ.1 ರವರ ಗಾಯದ ಪ್ರಮಾಣ ಪತ್ರವನ್ನು ನಿಪಿ.3 ರಂತೆ ಚಾಸಾ.7 ರವರಿಂದ ಪಡೆದಿದ್ದು, ಅದೇ ದಿನ 3 ಮತ್ತು 4 ಆರೋಪಿತರ ವಿರುದ್ಧ Absconding charge sheet ಮತ್ತು ಉಳಿದ ಆರೋಪಿತರ ವಿರುದ್ದ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುವುದಾಗಿ ನುಡಿದಿರುತ್ತಾರೆ.

**22.** ಆರೋಪಿ ಪರ ವಕೀಲರು ಪ್ರಾಸಾ-8 ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ಸದರಿಯವರು ಪಾಟೀಸವಾಲಿನಲ್ಲಿ ನಿಪಿ.2ರ ಕೊನೆಯ ಸಾಲಿನಲ್ಲಿ ವೈಟ್ನರ್ ಬಳಸಿದ್ದು,

ದೋಷಾರೋಪಣೆ ಪಟ್ಟಿಯ ಎಲ್ಲಾ ಪುಟಗಳಲ್ಲೂ ಕಲಂ 323 ಅನ್ನು ಹೆಚ್ಚುವರಿಯಾಗಿ ಬರೆಯಲಾಗಿದ್ದು, ಸದರಿ ಕಲಂ 323 ಅನ್ನು ಹೆಚ್ಚುವರಿಯಾಗಿ ಸೇರಿಸಲು ಚಾಸಾ.1 ರವರ ಮರುಹೇಳಿಕೆ ಮಾಡಿಲ್ಲ. ಚಾಸಾ.1 ರವರ ಬಸ್ಸಿನ ಪ್ರಯಾಣಿಕರ ಹೇಳಿಕೆಗಳನ್ನು ದಾಖಲಿಸಿಲ್ಲ. ಎಂ ಎಂ ಟ್ರಾವೆಲ್ಸ್ ನ ಬಸ್ಸಿನ ಪ್ರಯಾಣಿಕರ ಹೇಳಿಕೆಗಳನ್ನು ದಾಖಲಿಸಿಲ್ಲ ಎಂದು ನುಡಿದಿರುತ್ತಾರೆ.

**23.** ಈ ಪ್ರಕರಣದಲ್ಲಿ ಈ ಪ್ರಕಣದಲ್ಲಿ ಕರ್ತವ್ಯ ದೃಡೀಕರಣ ಮತ್ತು ಲಾಗ್ ಶೀಟ್ ಅನ್ನು ಮೊದಲೆ ನಿಪಿ.5 ಮತ್ತು 6 ಎಂದು ನಿಶಾನಿಕರಿಸಿದ್ದು, ಚಾಸಾ.8 ರವರವರನ್ನು ಉಭಯ ವಕೀಲರ ಸಮ್ಮತಿಯ ಮೇರೆಗೆ ವಿಚಾರಣೆಯಿಂದ ಕೈ ಬಿಡಲಾಗಿರುತ್ತದೆ. ಈ ಪ್ರಕರಣದಲ್ಲಿ ಪ್ರಾಸಾ.1 ರಿಂದ 3 ನೇ ಆರೋಪಿತರ ಜೊತೆಗೆ 4ನೇ ಆರೋಪಿ ಗಂಗಾಧರ ಸಹ ಹಲ್ಲೆಯ ಸಮಯದಲ್ಲಿ ಇದ್ದರು ಎಂದು ನುಡಿದಿದ್ದು, ಆದರೆ 4ನೇ ಆರೋಪಿಯ ವಿರುದ್ದ ಪ್ರಕರಣ ಕ್ವಾಶ್ (Quash) ಆಗಿರುವ ಬಗ್ಗೆ ಕಂಡುಬರುತ್ತದೆ. ಮುಂದುವರಿದು, ಘಟನಾ ನಡೆದಿದೆ ಎನ್ನುವ ಸ್ಥಳದಲ್ಲಿ ಬಸ್ ನಿಲ್ದಾಣ ಇದ್ದ ಬಗ್ಗೆ ಯಾವುದೇ ನಮೂದು ಲಾಗ್ ಬುಕ್ ನಲ್ಲಿ ನಮೂದಿಸಿಲ್ಲ ಎನ್ನುವುದು ಕಂಡುಬರುತ್ತದೆ. ಮುಂದುವರಿದು, ಪ್ರಾಸಾ.1 ರವರು ತಾನು ದೂರು ನೀಡುವಾಗ ತನ್ನ ಮೇಲಾಧಿಕಾರಿ ಬಂದಿದ್ದರು ಎಂದು ನುಡಿದಿದ್ದು, ಸದರಿ ವಿಚಾರವನ್ನು ತನಿಖಾಧಿಕಾರಿ ಹೇಳಿರುವುದಿಲ್ಲ. ಮುಂದುವರಿದು, ಪ್ರಾಸಾ.1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತರನ್ನು ತಾನೇ ಬಸ್ಸಿ ನಲ್ಲಿ ಕೂರಿಸಿಕೊಂಡು ಪೋಲಿಸರಿಗೆ ಒಪ್ಪಿಸಿದ್ದೆ ಎಂದು ತನ್ನ ಮುಖ್ಯ ವಿಚಾರಣೆಯಲ್ಲಿ ನುಡಿದಿದ್ದು, ಆದರೆ ಸದರಿ ವಿಚಾರವನ್ನು

ನಿಪಿ.1 ರ ದೂರಿನಲ್ಲಿ ನಮೂದಿಸದಿರುವುದು ಕಂಡುಬರುತ್ತದೆ. ಬಹು ಮುಖ್ಯವಾಗಿ ಪ್ರಾಸಾ.1 ರವರು ತಾನು ಮೊದಲು ಆಸ್ಪತ್ರೆಗೆ ಹೋಗಿದ್ದೆ ಎಂದು ತನ್ನ ಪಾಟೀ ಸವಾಲಿನಲ್ಲಿ ನುಡಿದಿದ್ದು, ಆದರೆ ತನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತರನ್ನು ಪೋಲಿಸ್ ಠಾಣೆಗೆ ಒಪ್ಪಿಸಿ ನಂತರ ಆಸ್ಪತ್ರೆಗೆ ಹೋಗಿರುತ್ತೇನೆ ಎಂದು ನುಡಿದಿರುವುದು ಕಂಡುಬರುತ್ತದೆ. ಪ್ರಾಸಾ.1 ರವರು ತನ್ನ ಸಮವಸ್ತ್ರ ಹರಿದಿರಲಿಲ್ಲ ಎಂದು ತಮ್ಮ ಪಾಟೀ ಸವಾಲಿನಲ್ಲಿ ನುಡಿದಿರುತ್ತಾರೆ. ಮುಂದುವರಿದು, ಚಾಸಾ.1 ರವರ ಗಾಯದ ಪ್ರಮಾಣ ಪತ್ರದಲ್ಲಿ ಎಡಭಾಗದಲ್ಲಿ ಹಲ್ಲೆಯಾಗಿತ್ತು ಎಂದು ನಮೂದಾಗಿದ್ದು ಆದರೆ ಪ್ರಾಸಾ.1 ರವರು ತಮ್ಮ ಪಾಟೀ ಸವಾಲಿನಲ್ಲಿ ತಮ್ಮ ಕಪಾಳದ ಬಲ ಭಾಗಕ್ಕೆ ಹೊಡೆದಿದ್ದಿರು ಎಂದು ನುಡಿದಿರುವುದು ಕಂಡುಬರುತ್ತದೆ.

**24.** ಮುಂದುವರಿದು, ತಮ್ಮ ಪಾಟೀ ಸವಾಲಿನಲ್ಲಿ ಭುಜ ಬಲಭಾಗಕ್ಕೆ ಹಲ್ಲೆ ಮಾಡಿದ್ದರು ಎಂದು ನುಡಿದಿದ್ದು ಸದರಿ ವಿಚಾರವನ್ನು ನಿಪಿ.1 ರಲ್ಲಿ ನಮೂದಿಸದಿರುವುದು ಕಂಡುಬರುತ್ತದೆ. ಮುಂದುವರಿದು, ನಿಪಿ.2 ರ ಸ್ಥಳ ಪಂಚನಾಮೆ ಜರುಗಿಸುವಲ್ಲಿ ಸ್ವತಂತ್ರ್ಯ ಮತ್ತು ಸ್ಥಳಿಕರನ್ನು ಸಾಕ್ಷಿದಾರರನ್ನಾಗಿ ಮಾಡದೆ ಕೇವಲ ಪ್ರಾಸಾ. 1 ರವರ ಪರಿಚಯಸ್ಥರು ಮತ್ತು ಸಂಬಂಧಿಕರನ್ನು ಮಹಜರ್ ಸಾಕ್ಷಿದಾರರನ್ನಾಗಿ ತೋರಿಸಿರುವುದು ಕಂಡುಬರುತ್ತದೆ. ಅದು ಅಲ್ಲದೆ ಘಟನಾ ಸಮಯದಲ್ಲಿ ಪ್ರಾಸಾ.1 ರವರ ಬಸ್ಸಿನ ಪ್ರಯಾಣಿಕರನ್ನು ಘಟನೆಯ ಕುರಿತು ಸಹ ಪ್ರಯಾಣಿಕರನ್ನು ವಿಚಾರಣೆಗೆ ಒಳಪಡಿಸಬಹುದಾಗಿತ್ತು, ಆದರೆ ಆ ರೀತಿಯ ಯಾವುದೇ ಪ್ರಯಾಣಿಕರನ್ನು ವಿಚಾರಣೆಗೆ

ಒಳಪಡಿಸದಿರುವುದು ಕಂಡುಬರುತ್ತದೆ. ಪ್ರಾಸಾ.1 ರವರು ಚಾಸಾ.5 ರವರು ತನ್ನ ಸಂಬಂಧಿಕರಲ್ಲ ಎಂದು ನುಡಿದಿರುತ್ತಾರೆ. ಮುಂದುವರಿದು, ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ.2 ರವರು ಪ್ರಾಸಾ.1 ರವರು ಬಸ್ಸಿನಿಂದ ಕೆಳಗೆ ಇಳಿದು ಕೇಳಿದಾಗ ಗಲಾಟೆಯಾಯಿತು ಎಂದು ನುಡಿದಿದ್ದು ಆದರೆ ಪ್ರಾಸಾ.1 ರವರು ಆರೋಪಿತರು ತನ್ನನ್ನು ಬಸ್ಸಿನಿಂದ ಕೆಳಗೆ ಎಳೆದುಕೊಂಡರು ಎಂದು ನಿಪಿ.1 ರ ದೂರಿನಲ್ಲಿ ನಮೂದಿಸಿರುತ್ತಾರೆ. ಮುಂದುವರಿದು, ಪ್ರಾಸಾ.2 ರವರು ಕಿವಿಗೆ , ಹೊಟ್ಟೆಗೆ ಕಾಲಿನಿಂದ ಒದ್ದರು ಎಂದು ನುಡಿದಿದ್ದು, ಆದರೆ ಪ್ರಾಸಾ.1 ರವರು ಕಪಾಳಕ್ಕೆ ಹೊಡೆದಿದ್ದು ಎಂದು ನುಡಿದಿರುತ್ತಾರೆ. ಮತ್ತೊಂದಡೆ ನಿಪಿ.3ರಲ್ಲಿ ನಮೂದಾಗಿರುವ ಗಾಯಗಳ ವಿವರಣೆಗೂ ಮತ್ತು ಪ್ರಾಸಾ.1 ಮತ್ತು 2 ರವರು ಹೇಳಿದ ಅಂಶಗಳಿಗೂ ತಾಳೆ ಇರುವುದಿಲ್ಲ. ಮುಂದುವರಿದು, ಪ್ರಾಸಾ.2 ರವರು ಆರೋಪಿತರನ್ನು ಠಾಣೆಗೆ ಬಿಟ್ಟು ನಂತರ ದೂರನ್ನು ನೀಡಿರುವುದಾಗಿ ನುಡಿದಿರುತ್ತಾರೆ. ಜೊತೆಗೆ , ಪ್ರಾಸಾ.2 ರವರು ಬಸ್ಸು ಸರ್ವಿಸ್ ರಸ್ತೆಯಲ್ಲಿ ನಿಂತಿತ್ತು ಎಂದು ನುಡಿದಿದ್ದು, ಆದರೆ ಪ್ರಾಸಾ.1 ರವರು ತಮ್ಮ ಬಸ್ಸಿಗೆ ಅಡ್ಡಲಾಗಿ ಆರೋಪಿಯ ಬಸ್ಸನ್ನು ನಿಲ್ಲಿಸಲಾಗಿತ್ತು ಎಂದು ನುಡಿದಿರುತ್ತಾರೆ. ಜೊತೆಗೆ ಪ್ರಾಸಾ.1 ರವರು ಬಸ್ಸಿನಲ್ಲಿ ಸೀಟಿಂಗ್ ಕೆಪಾಸಿಟಿಗಿಂತ ಹೆಚ್ಚು ಜನ ಪ್ರಯಾಣಿಕರು ಇದ್ದರು ಎಂದು ನುಡಿದಿರುತ್ತಾರೆ. ಸದರಿ ಪ್ರಯಾಣಿಕರನ್ನು ಯಾರನ್ನು ಸಹ ವಿಚಾರಣೆಗೆ ಒಳಪಡಿಸದಿರುವುದು ಕಂಡುಬರುತ್ತದೆ.

**25.** ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ.3 ರವರು ತಾನು ಜಗಳವನ್ನು ಬಿಡಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಮತ್ತು ತಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಪ್ರಾಸಾ.3 ರವರು ಪ್ರಾಸಾ.1 ರವರಿಗೆ ಆರೋಪಿತರು ಪ್ರಾಸಾ.1 ರವರಿಗೆ ದೇಹದ ಯಾವ ಭಾಗದಲ್ಲಿ ಹಲ್ಲೆ ಮಾಡಿದ್ದಾರೆ ತನಗೆ ಎಂದು ನುಡಿದಿರುತ್ತಾರೆ. ಮತ್ತೋರ್ವ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ.4 ರವರು ಸಹ ಪ್ರಾಸಾ.1 ರವರು ಕೆಳಗೆ ಇಳಿದು ಕೇಳಿದಾಗ ಎಂದು ತನ್ನ ಮುಖ್ಯ ವಿಚಾರಣೆಯಲ್ಲಿ ನುಡಿದಿದ್ದು ಆದರೆ ಪ್ರಾಸಾ.1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ತಾನು ಬಸ್ಸಿ ನಿಂದ ಇಳಿದು ಕೇಳಿದಾಗ ಎಂದು ನುಡಿದಿದ್ದು, ಆದರೆ ನಿಪಿ.1 ರ ದೂರಿನಲ್ಲಿ ಆರೋಪಿತರು ತನ್ನನ್ನು ಕೆಳಗೆ ಎಳೆದುಕೊಂಡರು ಎಂದು ನಮೂದು ಮಾಡಿರುವುದು ಕಂಡುಬರುತ್ತದೆ. ಮುಂದುವರಿದು, ಮಹಜರ್ ಸಾಕ್ಷಿದಾರರಾದ ಪ್ರಾಸಾ.5 ರವರು ಪ್ರಾಸಾ.1 ರವರು ತನ್ನ ಸಂಬಂಧಿ ಎಂದು ತನ್ನ ಪಾಟೀ ಸವಾಲಿನಲ್ಲಿ ಒಪ್ಪಿರುತ್ತಾರೆ. ಮುಂದುವರಿದು, ಪ್ರಾಸಾ.5 ರವರು ಘಟನೆಯ ಬಗ್ಗೆ ಏನು ಗೊತ್ತಿಲ್ಲ ಎಂದು ಸೂಚಿಸಿದರೇ ಸದರಿ ಸೂಚನೆಯನ್ನು ಒಪ್ಪಿರುತ್ತಾರೆ. ಪ್ರಾಸಾ.6 ರವರು ನಿಪಿ.2 ನ್ನು ತಾನು ಓದಿರುವುದಿಲ್ಲ ಎಂದು ನುಡಿದಿರುತ್ತಾರೆ. ಹಾಗಾಗಿ, ಅಭಿಯೋಜನೆ ಪ್ರಾಸಾ.6 ರವರ ಸಾಕ್ಷ್ಯದಿಂದ ಪಂಚನಾಮೆ ಜರುಗಿಸಿದ ಬಗ್ಗೆ ರುಜುವಾತುಪಡಿಸಿದಂತೆ ಆಗುವುದಿಲ್ಲ . ಬಹು ಮುಖ್ಯವಾಗಿ ಪ್ರಾಸಾ.1 ರವರು 3 ಮತ್ತು 4ನೇ ಆರೋಪಿತರ ಹೆಸರನ್ನು ಹೇಳಿರುತ್ತಾರೆ ಎಂದು ಅಭಿಯೋಜನೆ ಸೂಚಿಸಿದ್ದರೂ ತಾನು ಅವರ ಹೆಸರನ್ನು ಹೇಳಿರುವುದಿಲ್ಲ ಎಂದು ಅಲ್ಲಗಳೆದಿರುತ್ತಾರೆ . ಜೊತೆಗೆ

ಪ್ರಾಸಾ.1 ರವರು ಕರ್ನಾಟಕ ಸ್ಟೀಲ್ ಅಂಗಡಿಯ ಮುಂಭಾಗ ಯಾವುದೇ ಪಾರ್ಕಿಂಗ್ ಸ್ಥಳ ಮತ್ತು ಬಸ್ ನಿಲುಗಡೆ ಸ್ಥಳ ಇರುವುದಿಲ್ಲ ಎನ್ನುವ ಸೂಚನೆಯನ್ನು ಒಪ್ಪಿ ರುತ್ತಾರೆ. ಮುಂದುವರಿದು, ಪ್ರಾಸಾ.1 ರವರು ತಾನು ಪೋಲಿಸರಿಗೆ ಯಾವುದೇ ಮರು ಹೇಳಿಕೆ ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಜೊತೆಗೆ ಆ ದಿನ ತಾನು ಮೊದಲು ಆಸ್ಪತ್ರೆಗೆ ಹೋಗಿ ನಂತರ ಠಾಣೆಗೆ ಹೋಗಿರುವುದಾಗಿ ನುಡಿದಿದ್ದು, ಆದರೆ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ.2 ರವರು ಆರೋಪಿತರನ್ನು ಬಸ್ಸಿನಲ್ಲಿ ಕೂರಿಸಿಕೊಂಡು ಠಾಣೆಗೆ ಹೋಗಿರುತ್ತೇವೆ ಎಂದು ನುಡಿದಿರುವುದು ಸಹ ಕಂಡುಬರುತ್ತದೆ. ಮತ್ತೊಂದು ಮುಖ್ಯವಾದ ಅಂಶವೇನೆಂದರೆ ನಿಪಿ.2 ಸ್ಥಳ ಪಂಚನಾಮೆಗೆ ತಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದು ಪ್ರಾಸಾ.1 ರವರು ಒಪ್ಪಿರುತ್ತಾರೆ, ಸದರಿ ಸಮಯದಲ್ಲಿ ಯಾರು ಇದ್ದರು ಎಂದು ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಜೊತೆಗೆ ಘಟನಾ ದಿನದಿಂದು ನಿಪಿ.1 ದೂರಿನಲ್ಲಿ ತಮ್ಮ ಬಸ್ಸಿನ ಪ್ರಯಾಣಿಕರನ್ನು ಬೇರೆ ಬಸ್ಸಿಗೆ ಹೋಗಲು ವ್ಯವಸ್ಥೆ ಮಾಡಲಾಗಿತ್ತು ಎಂದು ತಾವು ಬರೆಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಮುಂದುವರಿದು, ವೈದ್ಯಾಧಿಕಾರಿ ಸಾಕ್ಷಿದಾರರಾದ ಪ್ರಾಸಾ.7 ರವರ ನಿಪಿ.3 ರಲ್ಲಿ ನಮೂದಾಗಿರುವ ಗಾಯಾಗಳು ಸೈಕಲ್ ನಿಂದ ಜಲ್ಲಿಕಲ್ಲು ರಸ್ತೆಯ ಮೇಲೆ ಬಿದ್ದಾಗಲು ಆಗಬಹುದು ಎನ್ನುವ ಸೂಚನೆಯನ್ನು ಒಪ್ಪಿರುತ್ತಾರೆ. ಹಾಗಾಗಿ, ನಿಪಿ.3 ರಲ್ಲಿನ ಗಾಯಗಳು ಹಲ್ಲೆಯ ಹೊರತಾಗಿಯು ಆಗಬಹುದು ಎನ್ನುವುದು ಕಂಡುಬರುತ್ತದೆ.

**26.** ಮುಂದುವರಿದು, ತನಿಖಾಧಿದಾರಿ ಸಾಕ್ಷಿದಾರರಾದ ಪ್ರಾಸಾ.8 ರವರು ಬಸ್ಸಿ ನಲ್ಲಿ ಇದ್ದ ಪ್ರಯಾಣಿಕರ ಹೇಳಿಕೆಯನ್ನು ದಾಖಲಿಸಿಲ್ಲ ಮತ್ತು ಎಂ.ಎಂ. ಟ್ರಾವೆಲ್ಸ್ ನ ಪ್ರಯಾಣಿಕರ ಹೇಳಿಕೆಯನ್ನು ದಾಖಲಿಸಿಲ್ಲ ಎಂದು ನುಡಿದಿರುತ್ತಾರೆ. ಮುಂದುವರಿದು, ನಿಪಿ.3 ರ ಗಾಯಾದ ಪ್ರಮಾಣ ಪತ್ರದಲ್ಲಿ ಘಟನಾ ಸ್ಥಳವನ್ನು ಬಸ್ಸಿನ ನಿಲ್ದಾಣ ವೃತ್ತ ಎಂದು ನಮೂದು ಮಾಡಿದ್ದು ಆದರೆ ಅಭಿಯೋಜನೆ ವಿಚಾರಣೆಗೆ ಒಳಪಡಿಸಿದ ಎಲ್ಲಾ ಸಾಕ್ಷಿದಾರರು ಕುಣಿಗಲ್ ಸಿವಿಲ್ ಬಸ್ ನಿಲ್ದಾಣದಿಂದ ಸ್ವಲ್ಪ ಮುಂದೆ ಸ್ಟೀಲ್ ಅಂಗಡಿಯ ಮುಂದೆ ಘಟನಾ ಸ್ಥಳ ಎಂದು ನುಡಿದಿರುವುದು ಕಂಡುಬರುತ್ತದೆ. ನಿಪಿ.1 ನ್ನು ತಾನು ಹೇಳಿದಂತೆ DSI ಸಾಹೇಬರು ಪೋಲಿಸ್ ಠಾಣೆಯ ಬಳಿ ಬರೆದಿರುತ್ತಾರೆ ಎಂದು ಪ್ರಾಸಾ.1 ರವರು ನುಡಿದಿದ್ದು, ಆ ಕುರಿತು DSIರವರು ಇದ್ದ ಬಗ್ಗೆ ಯಾವುದೇ ದಾಖಲೆಯನ್ನು ತನಿಖಾಧಿಕಾರಿ ಹಾಜರುಪಡಿಸಿರುವುದಿಲ್ಲ. ಜೊತೆಗೆ ಪ್ರಾಸಾ.2 ರವರು ಘಟನಾ ದಿನವೇ ಪೋಲಿಸರು ತನ್ನ ಹೇಳಿಕೆ ದಾಖಲು ಮಾಡಿದ್ದರು ಎಂದು ನುಡಿದಿದ್ದು, ಆದರೆ ಪ್ರಾಸಾ.2 ರವರ ಹೇಳಿಕೆಯನ್ನು 15 ದಿನಗಳ ನಂತರ ತನಿಖಾಧಿಕಾರಿ ದಾಖಲು ಮಾಡಿಕೊಂಡಿರುವುದು ಕಂಡುಬರುತ್ತದೆ. ಮುಂದುವರಿದು, ಮತ್ತೋರ್ವ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ.3 ರವರು ಘಟನಾ ಸ್ಥಳ ದಲ್ಲಿ ಒಂದು ವಾಹನ ನಿಂತಿದ್ದರೆ ಪಕ್ಕದಲ್ಲಿ ಮತ್ತೊಂದು ವಾಹನ ಹೋಗಬಹುದು ಎನ್ನುವ ಸೂಚನೆಯನ್ನು ಒಪ್ಪಿರುತ್ತಾರೆ. ಮುಂದುವರಿದು, ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ.4 ರವರು ಸದರಿ ರಸ್ತೆಯಲ್ಲಿ ಒಂದೇ ಬಾರಿಗೆ 2 ಬಸ್ಸುಗಳು ಮತ್ತು 1 ಕಾರು ಹೋಗಬಹುದು ಎನ್ನುವ ಸೂಚನೆಯನ್ನು ಒಪ್ಪಿರುತ್ತಾರೆ. ಹಾಗಿದ್ದರೆ

ಒಂದು ವೇಳೆ ಆರೋಪಿತರು ಬಸ್ಸನ್ನು ನಿಲ್ಲಿಸಿದ್ದರೆ ಪ್ರಾಸಾ.1ರವರು ತಮ್ಮ ಬಸ್ಸನ್ನು ಉಳಿದ ಜಾಗದಲ್ಲಿ ತೆಗೆದುಕೊಂಡು ಏಕೆ ಹೋಗಲಿಲ್ಲ ಎಂಬ ಪ್ರಶ್ನೆ ಉಂಟಾಗುತ್ತದೆ. ಬಹು ಮುಖ್ಯವಾಗಿ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ.4 ರವರು ಘಟನಾ ಸ್ಥಳದಲ್ಲಿ ಚಾಸಾ.1 ರವರ ಅಂಗಿಯ 2 ಗುಂಡಿಗಳು ಕಿತ್ತು ಹೋಗಿತ್ತು ಎಂದು ನುಡಿದಿದ್ದು, ಆದರೆ ಪ್ರಾಸಾ.1 ರವರು ತಮ್ಮ ಸಮವಸ್ತ್ರ ಹರಿದಿರಲಿಲ್ಲ ಮತ್ತು ತಮ್ಮ ಸಮವಸ್ತ್ರದ ಗುಂಡಿಗಳು ಕಿತ್ತು ಹೋಗಿರಲಿಲ್ಲ ಎಂದು ನುಡಿದಿರುತ್ತಾರೆ.

**27**. ಹಾಗಾಗಿ ಪ್ರಾಸಾ.4 ರವರು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಬೆಳವಣಿಗೆ ಮಾಡಿಕೊಂಡು ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಪ್ರಾಸಾ.4 ರವರು ತನ್ನ ಹೇಳಿಕೆಯಲ್ಲಿ ಏನು ಬರೆದುಕೊಂಡಿರುತ್ತಾರೆ ಎಂದು ತನಗೆ ಗೊತ್ತಿಲ್ಲ, ತನಗೆ ಸಹಿ ಮಾಡಲು ಹೇಳಿದ ಕಾರಣ ತಾನು ಸಹಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಜೊತೆಗೆ ಚಾಸಾ.1/ಪ್ರಾಸಾ.1 ರವರು ಒಂದೇ ಊರಿನವರು ಎನ್ನುವ ಸೂಚನೆಯನ್ನು ಒಪ್ಪಿ ರುತ್ತಾರೆ. ಜೊತೆಗೆ ತನ್ನ ಸಂಬಂಧಿಕರು ಎನ್ನುವ ಸೂಚನೆಯನ್ನು ಸಹ ಒಪ್ಪಿ ರುತ್ತಾರೆ. ಮುಂದುವರಿದು, ಮಹಜರ್ ಸಾಕ್ಷಿದಾರರಾದ ಪ್ರಾಸಾ.6 ರವರು ನಿಪಿ.2 ರ ಪಂಚನಾಮೆಯನ್ನು ತಾನು ಓದಿರುವುದಿಲ್ಲ ಎಂದು ನುಡಿದಿರುತ್ತಾರೆ. ಹಾಗಿದ್ದರೆ ಸದರಿಯವರು ಮಹಜರ್ ಪಂಚನಾಮೆಯ ವಿಚಾರಗಳನ್ನು ಓದದೇ ಸಹಿ ಮಾಡಿದ್ದರೆ ಎಂಬ ಪ್ರಶ್ನೆ ಉಂಟಾಗುತ್ತದೆ. ಮುಂದುವರಿದು, ತನಿಖಾಧಿಕಾರಿ ದೋಷಾರೋಪಣ ಪಟ್ಟಿಯಲ್ಲಿ ಪ್ರಾಸಾ.1 ರವರ ಬಸ್ಸು ಡಿಪೋಗೆ

ಹೋಗುತ್ತಿತ್ತು ಎಂದು ನಮೂದು ಮಾಡಿದ್ದು , ಆದರೆ ಪ್ರಾಸಾ.1 ರವರು ದೂರಿನಲ್ಲಿ ಕುಣಿಗಲ್ ಬಸ್ಸ್ ನಿಲ್ದಾಣಕ್ಕೆ ಹೋಗುವಾಗ ಎಂದು ನಮೂದು ಮಾಡಿರುವುದು ಸಹ ಕಂಡು ಬರುತ್ತದೆ .

ಹಾಗಾಗಿ ಓಟ್ಟಾರೆಯಾಗಿ, ನ್ಯಾಯಾಲಯದ ಮುಂದಿರುವ ಸಾಕ್ಷಿಧಾರರ ಸಾಕ್ಶೆಗಳನ್ನು ಗಮನಿಸಿದಾಗ ಪ್ರತ್ಯಕ್ಷ ಸಾಕ್ಷಿದಾರಾದ ಪ್ರಾಸಾ.2 ರಿಂದ 4 ರವರು ಮುಖ್ಯ ವಿಚಾರಣೆ, ಪೋಲಿಸರಿಗೆ ನೀಡಿದ ಹೇಳಿಕೆ ಮತ್ತು ಪಾಟೀ ಸವಾಲಿಗೂ ಬಹಳಷ್ಟು ವ್ಯತಿರಿಕ್ತತೆಗಳು ಇರುವುದು ಕಂಡುಬರುತ್ತದೆ. ಜೊತೆಗೆ ಪ್ರಾಸಾ.1 ರವರು ನೀಡಿದ ದೂರಿನ ಅಂಶಗಳಿಗೂ ಸದರಿ ಅವರ ಮೌಖಿಕ ಸಾಕ್ಷ್ಯಕ್ಕೂ ಬಹಳಷ್ಟು ವ್ಯತಿರಿಕ್ತತೆಗಳು ಇರುವುದು ಕಂಡುಬರುತ್ತದೆ.

**28.** ಮುಂದುವರೆದು ಈ ಮೇಲಿನಂತೆ ಪ್ರಾಸಾ.1 ರಿಂದ 6 ರವರ ಹೇಳಿಕೆಗಳಲ್ಲಿ ವ್ಯತ್ಯಾಸವಿರುತ್ತದೆ. ಈ ಹಂತದಲ್ಲಿ ಈ ನ್ಯಾಯಾಲಯ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಉಲ್ಲೇಖಿತ ತೀರ್ಪು - **ಶ್ರೀ ಸುರಾಜ್ ಮಾಲ್ ವಿರುದ್ದ ದೆಹಲಿ ಸರ್ಕಾರ (ಎಐಆರ್ 1979 ಎಸ್ ಸಿ 1408)** ನೀಡಿದ ತೀರ್ಪನ್ನು ಉಲ್ಲೇಖಿಸಲಾಗಿದೆ. ಸದರಿ ತೀರ್ಪನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಈ ರೀತಿಯಾಗಿ ಅಭಿಪ್ರಾಯ ವ್ಯಕ್ತಪಡಿಸಿರುತ್ತದೆ. *" It is well settled that where witnesses make two inconsistent statements in their evidence either one stage or two stages, the testimony of such witnesses becomes unreliable and unworthy of credence and in the absence of special circumstances no conviction can be based on the evidence of such witness".*

**29.** ಈ ಮೇಲಿನ ಸಂಗತಿಗಳನ್ನು ಗಮನಿಸಿದಾಗ ಆರೋಪಿತರು ಅಪರಾಧ ಎಸಗಿರುವುದನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವುದಿಲ್ಲ. ಈ ಪ್ರಕರಣದಲ್ಲಿ ಲಭ್ಯವಿರುವ

ಮೌಖಿಕ ಸಾಕ್ಷ್ಯ ಮತ್ತು ದಾಖಲಾತಿಗಳನ್ನು ಪರಿಶೀಲನೆ ಮಾಡಲಾಗಿ ಆರೋಪಿತರು ದೋಷಾರೋಪಣ ಪಟ್ಟಿಯಲ್ಲಿ ಹೇಳಿರುವಂತಹ ಯಾವುದೇ ಅಪರಾಧ ಮಾಡಿರುವುದು ಕಂಡು ಬರುವುದಿಲ್ಲ. ಒಟ್ಟಾರೆಯಾಗಿ ನ್ಯಾಯಾಲಯದ ಮುಂದಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಧಾರಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ಅವುಗಳು ಒಂದಕ್ಕೊಂದು ಪೂರಕವಾಗದೇ ಇರುವುದರಿಂದ ಅಭಿಯೋಜನೆಯ ಪ್ರಕರಣದ ಮೇಲೆ ಸಂಶಯ ಉದ್ಭವವಾಗುತ್ತದೆ. ಕಾರಣ ನ್ಯಾಯಾಲಯದ ಅಭಿಪ್ರಾಯದಲ್ಲಿ ಅಭಿಯೋಜನೆಯು ಆರೋಪಿತರ ವಿರುದ್ಧ ಮಾಡಲಾದ ಆಪಾದನೆಯನ್ನು ಸಂಶಯಾತೀತವಾಗಿ ಸಿದ್ದಪಡಿಸಲು ವಿಫಲರಾಗಿರುತ್ತಾರೆ. ಸದರಿ ವಿಫಲತೆಯ ಲಾಭವನ್ನು ಆರೋಪಿತರಿಗೆ ನೀಡಿ ಆರೋಪಿತರನ್ನು ಬಿಡುಗಡೆಗೊಳಿಸುವುದು ಸೂಕ್ತ ಎಂದು ಈ ನ್ಯಾಯಾಲಯವು ಭಾವಿಸುತ್ತದೆ. ಅಪರಾಧಿಕ ತತ್ವಗಳ ಪ್ರಕಾರ ಅಪರಾಧಿಕ ಪ್ರಕರಣಗಳಲ್ಲಿ ಅಭಿಯೋಜನೆಯ ಪ್ರಕರಣಗಳ ಮೇಲೆ ಸಂಶಯ ಉದ್ಭವಿಸಿದರೆ ಸದರಿ ಸಂಶಯದ ಲಾಭ ಆರೋಪಿತರಿಗೆ ನೀಡಬೇಕೆಂದು ಇರುತ್ತದೆ. ಆದ್ದರಿಂದ ಅಂಶ-1 ರಿಂದ 3 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

30. **ಅಂಶ. 4-** ಈ ಮೇಲಿನ ಅಂಶ-1 ರಿಂದ 3 ರಲ್ಲಿನ ಅಂಶಗಳ ಆಧಾರದ ಮೇಲೆ ಈ ಕೆಳಗಿನಂತೆ ಆದೇಶಿಸಲಾಗಿದೆ.

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ **248(1)** ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ.323, 353, 504, ಸಹ ವಾಚಕ ಕಲಂ.34 ರಡಿಯಲ್ಲಿನ ಶಿಕ್ಷಾರ್ಹ ಅಪರಾಧದಿಂದ ನಿರ್ದೋಷಿ ಎಂದು ತೀರ್ಮಾನಿಸಲಾಗಿದೆ.

ಆರೋಪಿತರ ಮತ್ತು ಅವರ ಪರ ಜಾಮೀನುದಾರರು ನೀಡಿರುವ ಜಾಮೀನು ಮುಚ್ಚಳಿಕೆ ಪತ್ರ ಕಲಂ 437(ಎ) ಸಿ.ಆರ್.ಪಿ.ಸಿ. ಯಂತೆ ಮುಂದಿನ 6 ತಿಂಗಳ ಕಾಲ ಜಾರಿಯಲ್ಲಿರುತ್ತದೆಂದು ಆದೇಶಿಸಲಾಗಿದೆ.

**(**ಶೀಘ್ರಲಿಪಿಗಾರಳು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದನ್ನು ನಾನು ಪರಿಷ್ಕರಿಸಿ**,** ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ದಿನಾಂಕ **2ನೇ ಜುಲೈ ಮಾಹೆ 2026** ರಂದು ಘೋಷಿಸಲಾಯಿತು**)**

**Sd/-**

**( ಸುಜಾತ ಎ ಬಿ)**

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ

ಕುಣಿಗಲ್ .

KATK510024132019



## ಅನುಬಂಧ

**ಅಭಿಯೋಜನೆ ಪರ ವಿಚಾರಣೆಗೊಳಪಟ್ಟ ಸಾಕ್ಷಿ ಗಳುಃ**

| | | |
|---|---|---|
| ಪ್ರಾಸಾ.1 | ಃ | ಶಶಿಧರ್ |
| ಪ್ರಾಸಾ.2 | ಃ | ಚನ್ನವೀರಗೌಡ ಡಿ.ಆರ್ |
| ಪ್ರಾಸಾ.3 | ಃ | ವೆಂಕಟರಮಣ |
| ಪ್ರಾಸಾ.4 | ಃ | ರಂಗಸ್ವಾ ಮಿ ವೈ. ಹೆಚ್ |
| ಪ್ರಾಸಾ.5 | ಃ | ರಂಗಪ್ಪ ಕೆ.ವಿ |
| ಪ್ರಾಸಾ.6 | ಃ | ರಂಗಸ್ವಾ ಮಿ ಕೆ |
| ಪ್ರಾಸಾ.7 | ಃ | ಡಾ.ಮಂಜುನಾಥ ಸ್ಮಾ ರಣ್ ಎಸ್ |
| ಪ್ರಾಸಾ.8 | ಃ | ಮಂಜುನಾಥ ಆರ್ |

**ಅಭಿಯೋಜನೆ ಪರ ಹಾಜರುಪಡಿಸಿದ ದಾಖಲೆಗಳುಃ**

| | | |
|---|---|---|
| ನಿಪಿ.1 | ಃ | ದೂರು |
| ನಿಪಿ.1(ಎ) | ಃ | ಪ್ರಾಸಾ-1 ರವರ ಸಹಿ |
| ನಿಪಿ.2 | ಃ | ಮಹಜರ್ |
| ನಿಪಿ.2(ಎ) | ಃ | ಪ್ರಾಸಾ.1 ರವರ ಸಹಿ |
| ನಿಪಿ.2(ಬಿ) | ಃ | ಪ್ರಾಸಾ.5 ರವರ ಸಹಿ |
| ನಿಪಿ.2(ಸಿ) | ಃ | ಪ್ರಾಸಾ.6 ರವರ ಸಹಿ |

| | | |
|---|---|---|
| ನಿಪಿ.2(ಡಿ) | ಃ | ಪ್ರಾಸಾ.8 ರವರ ಸಹಿ |
| ನಿಪಿ.3 | ಃ | ಗಾಯಾದ ಪ್ರಮಾಣ ಪತ್ರ |
| ನಿಪಿ.3(ಎ) | ಃ | ಪ್ರಾಸಾ.7 ರವರ ಸಹಿ |
| ನಿಪಿ.3(ಬಿ) | ಃ | ಪ್ರಾಸಾ.8 ರವರ ಸಹಿ |
| ನಿಪಿ.4 | ಃ | ಪ್ರಥಮ ವರ್ತಮಾನ ವರದಿ |
| ನಿಪಿ.4(ಎ) | ಃ | ಪ್ರಾಸಾ.8 ರವರ ಸಹಿ |
| ನಿಪಿ.5 | ಃ | ಕರ್ತವ್ಯ ಧೃಡೀಕರಣ ಪತ್ರ |
| ನಿಪಿ.5(ಎ) | ಃ | ಪ್ರಾಸಾ.8 ರವರ ಸಹಿ |
| ನಿಪಿ.6 | ಃ | ವಾಹನದ ಆಯಾ ದಿನದ ನಿವೇದನ ಪತ್ರ |
| ನಿಪಿ.6(ಎ) | ಃ | ಪ್ರಾಸಾ.8 ರವರ ಸಹಿ |

**ಅಭಿಯೋಜನೆ ಪರ ಗುರುತಿಸಿದ ಮುದ್ದೆ ಮಾಲುಗಳುಃ**-ಇಲ್ಲ-

**ಆರೋಪಿತರ ಪರ ವಿಚಾರಣೆಗೊಳಪಟ್ಟ ಸಾಕ್ಷಿ ಗಳುಃ**-ಇಲ್ಲ-

**ಆರೋಪಿತರ ಪರ ಹಾಜರುಪಡಿಸಿದ ದಾಖಲೆಗಳುಃ**-ಇಲ್ಲ-

**Sd/-**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**

**ಕುಣಿಗಲ್ .**